# PROCEEDINGS OF THE GOVERNMENT OF KARNATAKA

**Sub:-** Revision of the rates of Dearness Allowance payable to Teaching Staff on 2016 revised **UGC/ICAR** scales of pay - reg.

**READ:** - 1. G.O. No. FD 26 SRP 2018 dated: 30-10-2018.
2. G.O. No. AHF 113 VET 2018 dated: 16-03-2019.
3. G.O. No. ED 483 UNE 2017 dated: 16-03-2019.
4. G.O. No. AGD 127 AUM 2017 dated: 21-03-2019.
5. G.O. No. HCD 20 HEG 2018 dated: 21-03-2019.

**PREAMBLE:**

In Government orders dated: 16-03-2019 and 21-03-2019 read at (2) to (5) above orders have been issued revising the pay scale of faculties working in Government / Aided First Grade Colleges, Universities under the control of Higher Education Department as well as in respect of faculties working in Agriculture, Horticulture and Veterinary Sciences Universities in the State w.e.f. 01-01-2016.

In the said Government orders, provisions have been made to regulate the rates of dearness allowance on par with the rates sanctioned by GOI, subject to issue of Government order in this regard. However, in the said orders it has been ordered that the benefit of all allowances, including the benefit of dearness allowance in revised pay scale are admissible prospectively from the date of issue of respective orders. As stated above, the benefit of pay in the 2016 revised UGC/ICAR pay scale to the teachers and equivalent cadre staff working in Government/Aided First grade colleges and in Universities of the State as indicated in respective orders have been extended from 01.01.2016. Hence, in view of the administrative exigency, Government have considered it necessary to grant the benefit of Dearness allowance in the 2016 Revised Pay Scales to these category of employees w.e.f. 01.01.2019.

Accordingly the following orders are issued.

## GOVERNMENT ORDER NO. FD 3 SRP 2019
## BENGALURU, DATED 15th MAY 2019

Government are pleased to enhance the rates of Dearness Allowance payable to the teaching staff who are on 2016 Revised UGC/ICAR pay scales from **09% to 12%** of the revised basic pay with effect from **1st January 2019.**

2. For the purpose of this order, the term 'Basic Pay' means, the pay drawn by a Government employee in the 2016 Revised UGC/ICAR pay applicable to the post held by him.

3. Basic Pay shall not include any other emoluments.

4. Payment of arrears of Dearness Allowance shall not be made before the fixation of pay in 2016 Revised UGC/ICAR pay scales.

5. The Dearness Allowance admissible under this order is payable in cash until further orders.

6. The payment on account of Dearness Allowance involving fractions of 50 paise and above shall be rounded off to the next rupee and fractions less than 50 paise shall be ignored.

7. The Dearness Allowance will be shown as a distinct element of remuneration and will not be treated as pay for any purpose.

**BY ORDER AND IN THE NAME OF THE GOVERNOR OF KARNATAKA,**

**(D.S.JOGOJE)**
**Deputy Secretary to Government,**
**Finance Department (Services-2).**
BHR 15/5/19

The Compiler, Karnataka Gazette for publication in the next issue of the gazette and to supply 50 copies to Finance Department.

**To**

1. The Chief Secretary/Additional Chief Secretaries to Government.
2. The Principal Accountant General (General & Social Sector Audit), Karnataka, New Building, Audit Bhavan (P.B. No.5398), Bengaluru.
3. The Principal Accountant General (Economic and Revenue Sector Audit), Karnataka, New Building, Audit Bhavan (P.B.No.5398), Bengaluru.
4. The Principal Accountant General (Accounts & Entitlement), Karnataka, Park House Road, (P.B.No.5329), Bengaluru.
5. The Principal Secretaries/Secretaries to Government.
6. The Registrar General, High Court of Karnataka, Bengaluru.
7. The Registrar, Karnataka Lokayukta, Bengaluru.
8. The Registrar, Karnataka Administrative Tribunal, Bengaluru.
9. Principal District and Session Judges of All Districts.
10. Registrar (Admin) of all Universities in the State.
11. The Commissioner/Director, Collegiate Education/ Directorate of Technical Education, Bengaluru.
12. The Treasury Officer, State Huzur Treasury/District Treasuries.
13. The Director, Karnataka State Archives Department, Vikasa Soudha, Bengaluru.
14. The Project Officer, HRMS, Room No.145 'A', M.S.Building, Bengaluru.
15. The Senior Research Officer, Pay Research Unit, Department of Expenditure, Ministry of Finance, Government of India, New Delhi.
16. Karnataka Government Secretariat Library/Legislature Library.
17. Weekly Gazette/Section Guard File.

**Visit the Official Website of Finance Department, GOK :www.finance.kar.nic.in**

# ಕರ್ನಾಟಕ ಸರ್ಕಾರದ ನಡವಳಿ

ವಿಷಯ: 2016ರ ಪರಿಷ್ಕೃತ **ಯುಜಿಸಿ/ಐಸಿಎಆರ್** ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿರುವ ಬೋಧಕ ವರ್ಗದ ಸಿಬ್ಬಂದಿಗಳಿಗೆ ತುಟ್ಟಿ ಭತ್ಯೆಯ ದರಗಳನ್ನು ಪರಿಷ್ಕರಿಸುವ ಕುರಿತು.

ಓದಲಾಗಿದೆ: 1. ಸ.ಆ. ಸಂಖ್ಯೆ: ಆಇ 26 ಎಸ್‌ಆರ್‌ಪಿ 2018 ದಿನಾಂಕ: 30-10-2018

2. G.O. No. AHF 113 VET 2018 dated: 16-03-2019.

3. G.O. No. ED 483 UNE 2017 dated: 16-03-2019.

4. G.O. No. AGD 127 AUM 2017 dated: 21-03-2019.

5. G.O. No. HCD 20 HEG 2018 dated: 21-03-2019.

**ಪ್ರಸ್ತಾವನೆ:-**

ಮೇಲೆ (2) ರಿಂದ (5) ರಲ್ಲಿ ಓದಲಾದ ದಿನಾಂಕ: 16.03.2019 ಮತ್ತು 21.03.2019ರ ಸರ್ಕಾರಿ ಆದೇಶಗಳಲ್ಲಿ, ಉನ್ನತ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಸರ್ಕಾರಿ/ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳೂ ಸೇರಿದಂತೆ, ಕೃಷಿ, ತೋಟಗಾರಿಕೆ ಮತ್ತು ಪಶುಸಂಗೋಪನಾ ವಿಜ್ಞಾನಗಳ ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ವೇತನ ಶ್ರೇಣಿಗಳನ್ನು ದಿನಾಂಕ: 01.01.2016ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲಾಗಿರುತ್ತದೆ.

ಸರ್ಕಾರವು ಆದೇಶಗಳನ್ನು ಹೊರಡಿಸುವ ನಿಬಂಧನೆಗಳಿಗೊಳಪಟ್ಟು, ಕೇಂದ್ರ ಸರ್ಕಾರವು ಮಂಜೂರು ಮಾಡುವ ತುಟ್ಟಿ ಭತ್ಯೆದರಗಳಿಗೆ ಸರಿಸಮಾನವಾದ ದರಗಳಲ್ಲಿ ತುಟ್ಟಿ ಭತ್ಯೆಯ ದರಗಳನ್ನು ಸಕ್ರಮಗೊಳಿಸಲು ಸದರಿ ಆದೇಶಗಳಲ್ಲಿ ಅವಕಾಶಗಳನ್ನು ಕಲ್ಪಿಸಲಾಗಿರುತ್ತದೆ. ಆದರೆ, ಸದರಿ ಆದೇಶಗಳಲ್ಲಿ, ಪರಿಷ್ಕೃತ ವೇತನ ಶ್ರೇಣಿಗಳಲ್ಲಿನ ತುಟ್ಟಿ ಭತ್ಯೆಯೂ ಸೇರಿದಂತೆ ಇತರೆ ಎಲ್ಲಾ ಭತ್ಯೆಗಳ ಸೌಲಭ್ಯಗಳನ್ನು ಸಂಬಂಧಿಸಿದ ಆದೇಶಗಳನ್ನು ಹೊರಡಿಸಿದ ದಿನಾಂಕದಿಂದ ಭವಿಷ್ಯಾವರ್ತಿಯಾಗಿ ಲಭ್ಯವಾಗತಕ್ಕದೆಂದು ಆದೇಶಿಸಲಾಗಿರುತ್ತದೆ.

ಈ ಮೇಲೆ ತಿಳಿಸಿದಂತೆ, ಸರ್ಕಾರಿ/ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳೂ ಸೇರಿದಂತೆ, ಕೃಷಿ, ತೋಟಗಾರಿಕೆ ಮತ್ತು ಪಶುಸಂಗೋಪನಾ ವಿಜ್ಞಾನಗಳ ವಿಶ್ವವಿದ್ಯಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳು ಹಾಗೂ ತತ್ಸಮಾನ ವೃಂದದವರಿಗೆ, 2016ರ ಪರಿಷ್ಕೃತ ಯು.ಜಿ.ಸಿ./ಐ.ಸಿ.ಎ.ಆರ್. ವೇತನ ಶ್ರೇಣಿಗಳನ್ನು ದಿನಾಂಕ: 01.01.2016ರಿಂದ ಜಾರಿಗೆ ಬರುವಂತೆ ವಿಸ್ತರಿಸಲಾಗಿರುತ್ತದೆ. ಆದುದರಿಂದ, ಆಡಳಿತಾತ್ಮಕ ಹಿತದೃಷ್ಟಿಯಿಂದ ಈ ವರ್ಗದ ನೌಕರರುಗಳಿಗೆ, 2016ರ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ತುಟ್ಟಿ ಭತ್ಯೆಯ ಸೌಲಭ್ಯವನ್ನು ದಿನಾಂಕ: 01.01.2019ರಿಂದ ಜಾರಿಗೆ ಬರುವಂತೆ ಮಂಜೂರು ಮಾಡುವ ಅವಶ್ಯಕತೆಯನ್ನು ಸರ್ಕಾರವು ಪರಿಗಣಿಸಿರುತ್ತದೆ.

ಅದರಂತೆ, ಈ ಕೆಳಗಿನ ಆದೇಶಗಳನ್ನು ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಆಇ 3 ಎಸ್‌ಆರ್‌ಪಿ 2019**
**ಬೆಂಗಳೂರು, ದಿನಾಂಕ: 15ನೇ ಮೇ 2019**

2016ರ ಪರಿಷ್ಕೃತ ಯುಜಿಸಿ/ಐಸಿಎಆರ್ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ತುಟ್ಟಿ ಭತ್ಯೆಯ ದರವನ್ನು ಪರಿಷ್ಕೃತ ಮೂಲ

ವೇತನದ **ಶೇ.9** ರಿಂದ **ಶೇ.12ಕ್ಕೆ ದಿನಾಂಕ 1ನೇ ಜನವರಿ 2019** ರಿಂದ ಜಾರಿಗೆ ಬರುವಂತೆ ಹೆಚ್ಚಿಸಿ ಮಂಜೂರು ಮಾಡಲು ಸರ್ಕಾರವು ಹರ್ಷಿಸುತ್ತದೆ.

2. ಈ ಆದೇಶದ ಉದ್ದೇಶಗಳಿಗಾಗಿ 'ಮೂಲ ವೇತನ' ಎಂದರೆ ಸರ್ಕಾರಿ ನೌಕರನು ಧಾರಣ ಮಾಡಿರುವ ಹುದ್ದೆಗೆ ಅನ್ವಯವಾಗುವ 2016ರ ಪರಿಷ್ಕೃತ ಯುಜಿಸಿ/ಐಸಿಎಆರ್ ವೇತನ ಶ್ರೇಣಿಗಳಲ್ಲಿ ಪಡೆಯುವ ವೇತನ.

3. ಮೂಲ ವೇತನಕ್ಕೆ ಇನ್ಯಾವುದೇ ಉಪಲಬ್ಧಗಳನ್ನು ಸೇರಿಸತಕ್ಕದ್ದಲ್ಲ.

4. 2016ರ ಪರಿಷ್ಕೃತ ಯು.ಜಿ.ಸಿ./ಐ.ಸಿ.ಎ.ಆರ್. ವೇತನ ಶ್ರೇಣಿಗಳಲ್ಲಿ ವೇತನ ನಿಗದಿಪಡಿಸುವ ಮೊದಲೇ ತುಟ್ಟಿ ಭತ್ಯೆ ಬಾಕಿಯನ್ನು ಪಾವತಿಸತಕ್ಕದಲ್ಲ.

5. ಈ ಆದೇಶದ ಮೇರೆಗೆ ಮಂಜೂರಾಗಿರುವ ತುಟ್ಟಿ ಭತ್ಯೆಯನ್ನು ಮುಂದಿನ ಆದೇಶ ಹೊರಡಿಸುವವರೆಗೆ ನಗದಾಗಿ ಪಾವತಿ ಮಾಡಲಾಗುವುದು.

7. ತುಟ್ಟಿ ಭತ್ಯೆಯ ಕಾರಣದಿಂದ ಸಂದಾಯ ಮಾಡಬೇಕಾಗಿರುವ ಐವತ್ತು ಪೈಸೆ ಹಾಗೂ ಅದಕ್ಕಿಂತ ಹೆಚ್ಚಿನ ಭಿನ್ನಾಂಕಗಳನ್ನು ಮುಂದಿನ ರೂಪಾಯಿಗೆ ಪೂರ್ಣಗೊಳಿಸತಕ್ಕದ್ದು ಮತ್ತು ಐವತ್ತು ಪೈಸೆಗಿಂತ ಕಡಿಮೆ ಇರುವ ಭಿನ್ನಾಂಕಗಳನ್ನು ಕಡೆಗಣಿಸತಕ್ಕದ್ದು.

8. ತುಟ್ಟಿ ಭತ್ಯೆಯನ್ನು ಸಂಭಾವನೆಯ ವಿಶಿಷ್ಟ ಅಂಶವಾಗಿ ತೋರಿಸುವುದು ಮತ್ತು ಯಾವುದೇ ಉದ್ದೇಶಕ್ಕಾಗಿ ಇದನ್ನು ವೇತನ ಎಂದು ಪರಿಗಣಿಸಲಾಗುವುದಿಲ್ಲ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

(ಡಿ.ಎಸ್.ಜೋಗೋಜಿ)
**ಸರ್ಕಾರದ ಉಪ ಕಾರ್ಯದರ್ಶಿ,**
**ಆರ್ಥಿಕ ಇಲಾಖೆ (ಸೇವೆಗಳು-2).**
BHR 15/5/19

ಸಂಕಲನಕಾರರು, ಕರ್ನಾಟಕಗೆಜೆಟ್, ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 50 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

**ಇವರಿಗೆ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು.
2. ಪ್ರಧಾನ ಮಹಾಲೇಖಪಾಲರು(G&SSA),ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ (ಪಿ.ಬಿ. ನಂ.5398), ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (E&RSA),ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ (ಪಿ.ಬಿ. ನಂ.5398) ಬೆಂಗಳೂರು.
4. ಪ್ರಧಾನ ಮಹಾಲೇಖಪಾಲರು(ಲೆಕ್ಕಗಳು ಮತ್ತು ಹಕ್ಕುಗಳು),ಕರ್ನಾಟಕ, ಪಾರ್ಕ್‌ಹೌಸ್‌ರಸ್ತೆ(ಪಿ.ಬಿ. ನಂ.5329), ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
6. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
7. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

8. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು.
9. ಎಲ್ಲಾ ಜಿಲ್ಲೆಗಳ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು.
10. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರು (ಆಡಳಿತ).
11. ಆಯುಕ್ತರು / ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ/ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
12. ಖಜಾನೆಅಧಿಕಾರಿ, ರಾಜ್ಯ ಹುಜೂರುಖಜಾನೆ/ಜಿಲ್ಲಾ ಖಜಾನೆಗಳು.
13. ನಿರ್ದೇಶಕರು, ಕರ್ನಾಟಕರಾಜ್ಯ ಪತ್ರಾಗಾರ ಇಲಾಖೆ, ವಿಕಾಸ ಸೌಧ, ಬೆಂಗಳೂರು.
14. ಪ್ರಾಜೆಕ್ಟ್ ಆಫೀಸರ್, ಹೆಚ್.ಆರ್.ಎಂ.ಎಸ್., ಕೊಠಡಿ ಸಂಖ್ಯೆ:145'ಎ',ಬಹುಮಹಡಿಗಳ ಕಟ್ಟಡ, ಬೆಂಗಳೂರು.
15. ಕರ್ನಾಟಕ ಸರ್ಕಾರ ಸಚಿವಾಲಯದಗ್ರಂಥಾಲಯ/ವಿಧಾನ ಮಂಡಲದಗ್ರಂಥಾಲಯ.
16. ವಾರಪತ್ರ/ಶಾಖೆಯ ರಕ್ಷಾ ಕಡತ.

**ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಕೃತ ಅಂತರ್ಜಾಲತಾಣ www.finance.kar.nic.in ವೀಕ್ಷಿಸಿ.**